ಓ.ಎಸ್ ನಂಃ 36-2013

**ಡಿ. ಡಬ್ಲ್ಯೂಃ** 1

ದಿಃ 15-02-2020 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಃ ಶ್ರೀ ಎಸ್. ಎಸ್. ಆರ್. ವಾದಿ ಪರ ವಕೀಲರಿಂದ:</u>

ನಾನು ಶಿಗ್ಗಾಂವಿಯಲ್ಲಿ ವಾಸವಾಗಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಶಾಲೆಯನ್ನು ಕಲಿತಿರುವುದಿಲ್ಲ. ವಾದಿಯು ನನ್ನ ಹೆಂಡತಿ. 2 ನೇ ಪ್ರತಿವಾದಿಯು ಕೂಡ ನನ್ನ ಹೆಂಡತಿ. 45 ವರ್ಷಗಳ ಹಿಂದೆ ನನ್ನ ಹಾಗೂ ವಾದಿಯ ಮದುವೆ ಆಗಿರುತ್ತದೆ. ನಾನು 2 ನೇ ಪ್ರತಿವಾದಿಯನ್ನು ಮದುವೆ ಆಗಿ ಸುಮಾರು 30 ವರ್ಷ ಆಗಿರುತ್ತದೆ. ಪ್ರೇಮಾ ಮತ್ತು ರೇಣುಕಾ ಎಂಬ ಇಬ್ಬರೂ ವಾದಿಗೆ ಹೆಣ್ಣು ಮಕ್ಕಳು ಎಂದರೆ ಸರಿ. 2 ನೇ ಪ್ರತಿವಾದಿಗೆ 3 ರಿಂದ 6 ನೇ ಪ್ರತಿವಾದಿಯರ ಮಕ್ಕಳು ಎಂದರೆ ಸರಿ. ವಾದಿಯರು ನಮ್ಮ ವಿರುದ್ಧ ದಾವಾ ಆಸ್ತಿಯಲ್ಲಿ ಹಿಸ್ಸೆ ಕೋರಿ ದಾವೆಯನ್ನು ಮಾಡಿರುತ್ತಾರೆ ಎಂದರೆ ಸರಿ. ದಾವೆಯಲ್ಲಿ ವಾದಿಯರು ದಾವಾ ಆಸ್ತಿ ಕುರಿತು ಏನೆಲ್ಲಾ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಕೈಪಿಯತ್.ನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಕೈಪಿಯತ್.ನಲ್ಲಿರುವ ಮಾಹಿತಿಗಳನ್ನು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕೈಪಿಯತನಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ವಾದಿಯರಿಗೆ ಧಾರವಾಡದಲ್ಲಿ ಆರ್. ಸಿ. ಸಿ. ಮನೆ ಮತ್ತು ಸೈಟು ಇದೆ ಎಂದು ಹೇಳಿ ಬರೆಸಿರುತ್ತೇನೆ ಅದರೆ ಅದರ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ವಾದಿಯರಿಗೆ ಮದುವೆ ಮಾಡಿ ಕೊಟ್ಟಿದ್ದರಿಂದ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಇರುವುದರಿಂದ ವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಯರು ನನ್ನ ಹೆಂಡತಿ ಹಾಗೂ ಮಕ್ಕಳು ಇರುವುದರಿಂದ ಅವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ.

2. ನನ್ನ ಕೈಪಿಯತ್ ಹಾಗೂ ಪ್ರಮಾಣ ಪತ್ರದಲ್ಲಿ ರಿ ಸ ನಂಃ 700 ರ ಶಿಗ್ಗಾಂವ ಗ್ರಾಮದಲ್ಲಿ ಇರುವ ಆಸ್ತಿಯು ಪ್ರತಿವಾದಿ 3 ಮತ್ತು 4 ನೇದವರು ಖರೀದಿ ಹಿಡಿದಿರುವ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್ ನಂಃ 36-2013
ಡಿ. ಡಬ್ಲ್ಯೂಃ 1

3 ಮತ್ತು 4 ನೇ ಪ್ರತಿವಾದಿಯರು ಸದರಿ ದಾವಾ ಆಸ್ತಿಯನ್ನು ಖರೀದಿ ಹಿಡಿದಿರುವ ಕುರಿತು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. 1 ನೇ ವಾದಿಯು ಧಾರವಾಡ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾವೆಯನ್ನು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯು ರಾಜೀ ಆಗಿ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯ ಅಣ್ಣ-ತಮ್ಮಂದಿರು ಬಂದು ಮತ್ತೆ ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-15 ನ್ನು ತೋರಿಸಲಾಗಿ ಸಾಕ್ಷಿಯ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ15(ಎ) ಹಾಗೂ ನಿಪಿ-15(ಬಿ) ಎಂದು ಗುರುತಿಸಲಾಯಿತು. 1 ನೇ ವಾದಿಯು ರಂಬೆಪುರದಲ್ಲಿ ಇದ್ದರು ಆದರೆ 2 ನೇ ಪ್ರತಿವಾದಿಯನ್ನು ನಾನು ಮದುವೆ ಮಾಡಿಕೊಂಡು ಮನೆಗೆ ಕರೆದುಕೊಂಡು ಬಂದಿದ್ದರಿಂದ 1 ನೇ ವಾದಿಯು ಖಾಯಂ ಆಗಿ ಧಾರವಾಡದಲ್ಲಿ ವಾಸವಾಗಲು ಹೋಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡಬಾರದೆಂದು ನಾನು 2 ರಿಂದ 6 ನೇ ಪ್ರತಿವಾದಿಯರ ಹೆಸರನ್ನು ದಾವಾ ಆಸ್ತಿಗೆ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿ ವಾದಿಯರಿಗೆ ಯಾವುದೇ ಹಿಸ್ಸೆಯನ್ನು ಕೊಡಬಾರದೆಂಬ ಉದ್ದೇಶದಿಂದ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ 2 ರಿಂದ 6 ನೇ ಪ್ರತಿವಾದಿಯರ ಹೆಸರನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಹಿ/- 15-02-2020
ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.